ಶ್ರೀಮತಿ ಮನೋರಮಾ ಮಾಧ್ವರಾಜ್.—ಸಂಪುಟದ ಸಭೆಯಲ್ಲಿ ಚರ್ಚೆಮಾಡಿ ಒಂದು ತೀರ್ಮಾನಕ್ಕೆ ನಾವು ಬರುತ್ತೇವೆ.

ಶ್ರೀ ವಾಟಾಳ್ ನಾಗರಾಜ್ —ಅಧ್ಯಕ್ಷರೆ, ಇದು ಸರಿಯಲ್ಲ, ತಾವು ದಾವಣಗೆರೆಯಲ್ಲಿದ್ದವರು, ಅಲ್ಲಿದ್ದ ಕಾಲೇಜುಗಳನ್ನು ನೋಡಿದ್ದೀರಿ. ಮೈಸೂರು, ಬೆಂಗಳೂರು ಕಾಲೇಜುಗಳನ್ನು ನೋಡಿದ್ದೀರಿ. ರಾಜಕೀಯ ಪ್ರಭಾವ ಪಡೆದವರ ಮತ್ತು ಜಾತಿ ಪ್ರಭಾವ ಪಡೆದವರ ಕಾಲೇಜುಗಳೇ ಆಗಿವೆ. ಇಂತಹ ಕಾಲೇಜುಗಳು ಬೇಡ. ಇವು ಬಡವರನ್ನು ಶೋಷಣೆ ಮಾಡುತ್ತವೆ. ಬಡಮಕ್ಕಳ ಶೋಷಣೆಯಾಗುತ್ತದೆ. ಕನ್ವಡಿಗರ ಶೋಷಣೆಯಾಗುತ್ತದೆ. ಇದು ಸರಿಯಲ್ಲ ಬಡ ಮಕ್ಕಳಿಗೆ ಬಹಳ ಅನ್ಯಾಯವಾಗುತ್ತದೆ ಇಂತಹ ಕಾಲೇಜುಗಳು ಬೇಡ ಎಂದು ಹೇಳಿ, ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

(ಗೊಂದಲ)

ಉಪಾಧ್ಯಕ್ಷರು.—ದಯವಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಎಂ. ನಾರಾಯಣಸ್ವಾಮಿ (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

## ನಿಯಮ ೩೩೪ರ ಮೇರೆಗೆ

### ೧) ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಪದವೀ ಪೂರ್ವ ಕಾಲೇಜಿನಲ್ಲಿ ಮಾರ್ಚ್ ೧೯೮೯ರ ಅಕ್ಟೋಬರ್ ೧೯೮೯ರ ಪರೀಕ್ಷಾ ಕೇಂದ್ರಗಳಲ್ಲಿ ಕೆಲಸ ಮಾಡಿದಂತಹ ಮೌಲ್ಯಮಾಪಕರ ಸಂಭಾವನೆಯನ್ನು ಕೊಡದೇ ಇರುವುದು,

ಶ್ರೀ ರುಕ್ಮಯ್ಯ ಪೂಜಾರಿ.— ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಪದವಿಪೂರ್ವ ಕಾಲೇಜಿನಲ್ಲಿ ೧೯೮೯ ಮಾರ್ಚ್ ಮತ್ತು ೮೯ ಅಕ್ಟೋಬರ್‌ನಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ಮೌಲ್ಯಮಾಪಕರಾಗಿ ಕೆಲಸ ಮಾಡಿದಂತಹ ಅಧ್ಯಾಪಕರುಗಳಿಗೆ ಕೊಡಬೇಕಾಗಿದ್ದ ಸಂಭಾವನೆ ಹಣವನ್ನು ಇವತ್ತಿನವರೆಗೆ ಕೊಟ್ಟಿರುವುದಿಲ್ಲ. ಮತ್ತು ವಿಟ್ಲ ಪದವಿ ಪೂರ್ವ ಕಾಲೇಜಿನಲ್ಲಿ ದುಡಿಯುತ್ತಿರುವ ಶ್ರೀ ಪಿ. ಕೃಷ್ಣಶಿಥಿಲಾಯರವರು ೮೯ರ ಅಕ್ಟೋಬರ್‌ನಲ್ಲಿ ವಿವೇಕಾನಂದ ಕಾಲೇಜು ಪುತ್ತೂರುನಲ್ಲಿ ನಡೆದ ಪರೀಕ್ಷಾ ಸಂದರ್ಭದಲ್ಲಿ ಕಸ್ಟೋಡಿಯನ್ ಆಗಿ ಕೆಲಸ ಮಾಡಿರುವುದರ ಟಿ.ಎ. ಬಿಲ್ಲು ಕೂಡ ಪಾವತಿಯಾಗಿರುವುದಿಲ್ಲ ಎಂಬುದಾಗಿ ಸರಕಾರದ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್.— ಇದಕ್ಕೆ ಹೇಳಿಕೆ ಕೊಡಬೇಕಾದುದೇನೂ ಇಲ್ಲ. ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಬಗ್ಗೆ. I take note of it.

### ೨) ಕೊಳ್ಳೇಗಾಲ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಿಂದ ಹೆರಿಗೆ ಭತ್ಯದ ಹಣ ದುರುಪಯೋಗ

ಶ್ರೀ ಜಿ. ರಾಜೂಗೌಡ.— ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಾದ ಶ್ರೀ ಬಸವರಾಜು ಅವರು ತಮ್ಮ ಸೇವೆಯ ಅವಧಿಯಲ್ಲಿ ಹೆರಿಗೆ ಭತ್ಯದ ಹಣದಲ್ಲಿ ಸುಮಾರು ೫೦,೦೦೦ ಕ್ಕಿಂತಲ್ಲೂ ಹೆಚ್ಚು ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಖಚಿತವಾಗಿ ತಿಳಿದು ಬಂದಿದೆ. ಯಾರಿಗೆ ಹೆರಿಗೆ ಭತ್ಯದ ಹಣವನ್ನು ಪಾವತಿ ಮಾಡಬೇಕು ಅವರ ಹೆಸರಿನ ಡಿ.ಡಿ.ಯನ್ನು ಪಡೆದು ಅವರಿಗೆ ಎತರಣೆ ಮಾಡಬೇಕೆಂಬ ಪದ್ಧತಿ ರೂಢಿಯಲ್ಲಿದ್ದರೂ ಸಹ ಅವರು ಇದನ್ನು ಕೈ ಬಿಟ್ಟು ಹಣವನ್ನು ಬಟವಾಡೆ ಮಾಡಿದ್ದಾರೆ. ಈ ರೀತಿಯಾಗಿ ಕೊಳ್ಳೇಗಾಲ ವಿಜಾನೆಯಿಂದ ಎ.ಸಿ. ಬಿಲ್ ಮುಖಾಂತರ ಲಕ್ಷಾಂತರ ರೂಪಾಯಿ ಹಣ ಪಡೆದು ಆದರಲ್ಲಿ ೫೦,೦೦೦ ಕ್ಕಿಂತ ಹೆಚ್ಚು ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಎರಡನೆಯದಾಗಿ ಕುಟುಂಬ ಕಲ್ಯಾಣ ಯೋಜನೆಯ ಕೆಳಗೆ ಕೈಗೊಳ್ಳುವ ಸಂತಾನ ಹರಣ ಶಸ್ತ್ರ ಚಿಕಿತ್ಸೆಯ ಹಣವನ್ನು ಪಡೆದು ಅದನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂಬುದಾಗಿ ತಿಳಿದು ಬಂದಿದೆ. ಇವರಿಗೆ ಕಾಡುಗೆರೆಯಿಂದ ಮಹದೇಶ್ವರ ಬೆಟ್ಟಕ್ಕೆ ವರ್ಗಾವಣೆ ಯಾಗಿದ್ದರೂ ಇವರ ಸ್ಥಳಕ್ಕೆ

ಬಂದಿರುವ ವೈದ್ಯಾಧಿಕಾರಿಗೆ ಚಾರ್ಜ್ ಕೊಡದೆ ವರ್ಗಾವಣೆ ರದ್ದುಪಡಿಸಿಕೊಳ್ಳಲು ೧೬-೬-೯೦ ರಿಂದಲೂ ಬೆಂಗಳೂರಿನಲ್ಲಿಯೇ ಠಿಕಾಣಿ ಹೂಡಿದ್ದಾರೆ. ಆದರ ಬಗ್ಗೆ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಮೈಸೂರು ಜಿಲ್ಲೆಯ ಆರೋಗ್ಯಾಧಿಕಾರಿಗಳನ್ನು (ಡಿ.ಹೆಚ್.ಒ)ರವರನ್ನು ಮೇಲ್ಕಂಡ ಭ್ರಷ್ಟಾಚಾರದ ಆರೋಪಪಟ್ಟಿ ತನಿಖೆ ಮಾಡಿಸಿ ಸಂಬಂಧಪಟ್ಟ ವೈದ್ಯಾಧಿಕಾರಿಯನ್ನು ಅಮಾನತ್ತಿನಲ್ಲಿಡಲು ಕ್ರಮ ಕೈಗೊಳ್ಳಬೇಕಾಗಿ ವಿನಂತಿ

ಶ್ರೀಮತಿ ಮನೋರಮಾ ಮಧ್ವರಾಜ್.— ಮಾನ್ಯ ಸದಸ್ಯರು ಏನು ನಮ್ಮ ಗಮನವನ್ನು ಸೆಳೆದಿದ್ದಾರೆ. ಅದರ ಬಗ್ಗೆ ಸೂಕ್ತವಾಗಿ ತನಿಖೆ ಮಾಡಿಸಿ ಅವರು ತಪ್ಪಿತಸ್ಥರೆಂದು ಕಂಡುಬಂದಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

## ೩) ಬೆಳಗಾಂ ವಿಭಾಗದ ಭೂಮಾಪನ ಮತ್ತು ಭೂ ದಾಖಲೆ ಇಲಾಖೆಯ ೪೧ ಜನ ನೌಕರರನ್ನು ಖಾಯಂ ಮಾಡಲು ಒತ್ತಾಯ

ಶ್ರೀ ಪಿ. ಸಿ. ಸಿದ್ದನಗೌಡರ್.— ಬೆಳಗಾಂ ವಿಭಾಗದಲ್ಲಿ ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯ ೪೧ ಜನ ನೌಕರರು ಸುಮಾರು ೨೦-೨೫ ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು ಇವರು ತಮ್ಮನ್ನು ಖಾಯಂ ಮಾಡಲು ವಿಧಾನಸೌಧದ ಎದುರಿಗೆ ಸೆರಕಾರವ ಗಮನ ಸೆಳೆಯಲು ಮಾರ್ಚ್ ೧೫ ರಿಂದ ಇಲ್ಲಿಯವರೆಗೂ ಧರಣಿ ಮಾಡುತ್ತಿದ್ದಾರೆ. ಆದರೂ ಸಹ ಸರಕಾರವ ವತಿಯಿಂದ ಸಂಬಂಧಿಸಿದ ಯಾರೊಬ್ಬರೂ ಅವರ ಬೇಡಿಕೆಯ ಬಗ್ಗೆ ಏನು ಕ್ರಮ ತೆಗೆದ ಕೊಳ್ಳದೆ ಅವರನ್ನು ಭೇಟಿಯಾಗದೇ ಇರುತ್ತಾರೆ. ಇವರಿಗೆ ಯಾವ ಆಧಾರದ ಮೇಲೆ ವೇತನವನ್ನು ನೀಡಲಾಗುತ್ತಿದೆ. ಹಾಗೂ ಇವರನ್ನು ಖಾಯಂ ಮಾಡುವ ಬಗ್ಗೆ ಸರಕಾರದ ನಿಲುವೇನು ಎಂಬ ಬಗ್ಗೆ ಸರಕಾರಕ್ಕೆ ಸಂಬಂಧಿಸಿದವರು ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಮಂತ್ರಿಗಳು).— ಮಾನ್ಯ ಉಪಾಧ್ಯಕ್ಷರೆ ? ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.

ಬೆಳಗಾಂ ವಿಭಾಗದಲ್ಲಿ ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆಯಲ್ಲಿ ೪೧ ಜನರು ಇಲಾಖೆಯ ದಾಖಲಾತಿಯನ್ನು ನಕಲು ತಯಾರಿಸುತ್ತಿರುವುದು ನಿಜವಾಗಿದೆ. ಇವರು ಈ ಕೆಳಕಂಡ ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ.

| ವರ್ಷ | | ಸಂಖ್ಯೆ |
|---|---|---|
| ೧೯೪೭ | | ೧ |
| ೧೯೭೧-೭೮ | | ೫ |
| ೧೯೮೧-೮೪ | | ೧೪ |
| ೧೯೮೫-೮೯ | | ೨೧ |
| | ಒಟ್ಟು | ೪೧ |

ಇವರೆಲ್ಲರೂ ಖಾಸಗಿ ವ್ಯಕ್ತಿಗಳಾಗಿರುತ್ತಾರೆ. ಇವರಿಗೆ ನೀಡಿರುವ ಸವಲತ್ತು ವಿಶೇಷವಾದದ್ದಾಗಿದ್ದು ಸರ್ಕಾರದ ಯಾವುದೇ ನಿಯಮಕ್ಕೆ ಒಳಪಟ್ಟಿರುವುದಿಲ್ಲ. ಇಂತಹ ಒಂದು ವ್ಯವಸ್ಥೆ ಬೆಳಗಾಂ ವಿಭಾಗದಲ್ಲಿ ಹೊರತು ಬೇರೆ ಎಲ್ಲಿಯೂ ಇರುವುದಿಲ್ಲ. ಈ ರೀತಿ ಕಾರ್ಯ ನಿರ್ವಹಿಸುತ್ತಿರುವ ನಕಲು ತಯಾರಿಕರಿಗೆ ಗರಿಷ್ಠ ಮಿತಿ ರೂ.೩೦೦ಗಳಿಗೆ ಒಳಪಟ್ಟು ನಕಲು ಫೀಸಿನಲ್ಲಿ ಹಣವನ್ನು ಸಂದಾಯ ಮಾಡಲಾಗುತ್ತಿದೆ. ಹಾಲಿ ತಿಂಗಳಿಗೆ ರೂ. ಕೊಡಲಾಗುತ್ತಿದೆ.

ಸದರಿ ಅಭ್ಯರ್ಥಿಗಳಿಗೆ ನಕಲು ತಯಾರಿಸಲು ಅನುಮತಿ ನೀಡುವಾಗ ಈ ಕೆಳಕಂಡ ಯಾವ ಅಂಶಗಳನ್ನೂ ಗಣನೆಗೆ ತೆಗೆದುಕೊಂಡಿಲ್ಲ.

೧) ಇವರನ್ನು ಯಾವುದೇ ಮಂಜೂರಾದ ಹುದ್ದೆಯಲ್ಲಿ ಕೆಲಸ ಮಾಡಲು ಅನುಮತಿ ನೀಡಿರುವುದಿಲ್ಲ.

೨) ಇವರ ವಯೋಮಿತಿ ಮತ್ತು ವಿದ್ಯಾರ್ಹತೆಯನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ.